




**ಸಪ್ನಾ ಕಟ್ಟಿ**

ಕಲೆ: ಅಕ್ಷಯ ಹೆಗಡೆ ಜಾಲಿಮನೆ


ಆ ಕಡೆಗೊಂದು ಈ ಕಡೆಗೊಂದು ಕಾಲು ಚೆಲ್ಲಿ ಮರ ಬುಡಮೇಲಾಗಿ ಬಿದ್ದಂತೆ ಮಲಗಿದ್ದ ಮಧುವನ್ನೇ ದಿಟ್ಟಿಸಿದ ಅವಿನಾಶನಿಗೆ ಅವಳು ಮದುವೆಯಾದ ಹೊಸತರಲ್ಲಿ ತನ್ನ ಕಡೆ ಮುಖ ಮಾಡಿಕೊಂಡು ಕಾಲೆರಡೂ ಮೊಣಕಾಲತನಕ ಮಡಚಿ ಹೊಟ್ಟೆಗೆ ಕೈ ಹಚ್ಚಿಕೊಂಡು ಮಲಗುತ್ತಿದ್ದುದೂ, ತಾನು 'ಏ ಮಧು ಒಳ್ಳೇ ಕುರುಪಿ ಶೇಪ್ ನಾಗ ಮಲಗ್ತೀ ನೋಡು ನೀ' ಅಂತ ಚೇಷ್ಟೆ ಮಾಡ್ತಿದ್ದುದೂ ನೆನಪಾಯ್ತು. ಅವಳಾಗ ಕುಲುಕುಲು ನಗ್ತಿದ್ದಳು. ನಕ್ಕಾಗೊಮ್ಮೆ ಅವಳ ಕಣ್ಣುಗಳು ಕಾಡಿಗೆ ಹಚ್ಚಿದಂತೆ ಕಪ್ಪಾಗುತ್ತಿದ್ದವು, 'ಕಣ್ಣು ಚೆಂದ ಇದ್ದವು ಅಂತ ನಗು ಸುಂದರವಾಗಿತ್ತೋ